ಉತ್ತರಿಸಬೇಕು. ಜನರಲ್ ಸ್ಟಡೀಸ್‌ನಲ್ಲಿ ಎರಡು ಅಂಕಗಳ ನೂರು ಪ್ರಶ್ನೆಗಳಿರುತ್ತವೆ. ಸಿಎಸ್‌ಎಟಿ ಪತ್ರಿಕೆಯಲ್ಲಿ 2.5 ಅಂಕದ 80 ಪ್ರಶ್ನೆಗಳಿರುತ್ತವೆ. ದೃಷ್ಟಿದೋಷವುಳ್ಳ ಅಭ್ಯರ್ಥಿಗಳಿಗೆ 20 ನಿಮಿಷಗಳ ಹೆಚ್ಚಿನ ಕಾಲಾವಕಾಶವಿರುತ್ತದೆ. ಪ್ರಶ್ನೆಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುತ್ತವೆ.

ಜನರಲ್ ಸ್ಟಡೀಸ್ ಪತ್ರಿಕೆಗೆ ಕನಿಷ್ಠ ಇಂತಿಷ್ಟು ಅಂಕ ಬರಬೇಕು ಎಂಬುದನ್ನು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಆಯಾ ವರ್ಷ ನಿರ್ಧರಿಸುತ್ತದೆ. ಸಿಎಸ್‌ಎಟಿಯಲ್ಲಿ ಕನಿಷ್ಠ 66 (ಶೇ 33) ಅಂಕಗಳನ್ನು ಗಳಿಸಿದವರು ಮಾತ್ರ ಮುಖ್ಯ ಪರೀಕ್ಷೆಗೆ ಹಾಜರಾಗುವ ಅರ್ಹತೆ ಪಡೆಯುತ್ತಾರೆ. ಆಂಗ್ಲ ಭಾಷೆಯ ಕಾಂಪ್ರಹೆನ್ಷನ್‌ಗೆ ಸಂಬಂಧಿಸಿದ ಪ್ರಶ್ನೆಯನ್ನು ಇಂಗ್ಲಿಷ್‌ನಲ್ಲೇ ಉತ್ತರಿಸಬೇಕು. ಪ್ರತೀ ಪತ್ರಿಕೆಗೂ ಋಣಾತ್ಮಕ (Negetive) ಮೌಲ್ಯಮಾಪನವಿರುತ್ತದೆ. ಪ್ರತೀ ಮೂರು ತಪ್ಪು ಉತ್ತರಗಳಿಗೆ ಒಂದು ಅಂಕ ಕಡಿಮೆಯಾಗುತ್ತದೆ ಅಥವಾ ಒಂದು ತಪ್ಪು ಉತ್ತರಕ್ಕೆ 1/3 ಅಂಕ ಕಡಿತಗೊಳ್ಳುತ್ತದೆ. ಸಿಎಸ್‌ಎಟಿ ಪತ್ರಿಕೆಯಲ್ಲಿ ಪ್ರತೀ ತಪ್ಪು ಉತ್ತರಕ್ಕೆ 0.83 ಅಂಕ ಕಡಿತಗೊಳ್ಳುತ್ತದೆ. ಆದರೆ, ಈ ಪ್ರಶ್ನೆಪತ್ರಿಕೆಯ ಪ್ರಶ್ನೆ ಸಂಖ್ಯೆ 74 ರಿಂದ 80ರ ವರೆಗಿನ 8 ಪ್ರಶ್ನೆಗಳು ತೀರ್ಮಾನ ಕೈಗೊಳ್ಳುವಿಕೆಗೆ (Decision Making) ಸಂಬಂಧಿಸಿರುವುದರಿಂದ ನೆಗೆಟಿವ್ ಮಾರ್ಕಿಂಗ್ ಇರುವುದಿಲ್ಲ.

## ಮುಖ್ಯ ಪರೀಕ್ಷೆ ಹೇಗಿರುತ್ತದೆ?

ಇದು ಆಫ್‌ಲೈನ್ ಪರೀಕ್ಷೆ. ಒಟ್ಟು ಒಂಬತ್ತು ಪತ್ರಿಕೆಗಳಿಗೆ ಉತ್ತರ ಬರೆಯಬೇಕು. ಸಾಮಾನ್ಯವಾಗಿ ಪ್ರತಿವರ್ಷ ಅಕ್ಟೋಬರ್‌ನಲ್ಲಿ ಈ ಪರೀಕ್ಷೆ ನಡೆಯುತ್ತದೆ. ಜನವರಿಯಲ್ಲಿ ಫಲಿತಾಂಶ ಬರುತ್ತದೆ. ಪ್ರತೀ ಪತ್ರಿಕೆಯೂ ಮೂರು ಗಂಟೆಗಳ ಅವಧಿಯದಾಗಿದ್ದು ದೃಷ್ಟಿದೋಷದವರಿಗೆ 30 ನಿಮಿಷ ಹೆಚ್ಚು ಕಾಲಾವಕಾಶವಿರುತ್ತದೆ. ಇಂಗ್ಲಿಷ್ ಭಾಷೆಯ ಪತ್ರಿಕೆ ಮತ್ತು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿರುವ ಯಾವುದಾದರೊಂದು ಭಾಷೆಯ ತಲಾ 300 ಅಂಕಗಳ ಪ್ರಶ್ನೆಪತ್ರಿಕೆಗಳಿಗೆ ಅಭ್ಯರ್ಥಿ ಉತ್ತರಿಸಬೇಕು. ಇಲ್ಲಿ ವಿದ್ಯಾರ್ಥಿಯ ಭಾಷಾ ಪ್ರೌಢಿಮೆ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಇಲ್ಲಿ ಗಳಿಸುವ ಅಂಕಗಳನ್ನು ರ‍್ಯಾಂಕಿಂಗ್‌ಗೆ ಪರಿಗಣಿಸುವುದಿಲ್ಲ.ಆದರೆ ಇವೆರಡೂ ಪತ್ರಿಕೆಗಳನ್ನು ನಿಗದಿಪಡಿಸಿದ ಕನಿಷ್ಠ ಅಂಕಗಳೊಂದಿಗೆ ಪಾಸ್ ಮಾಡಬೇಕು.

## ಕೊನೆಯ ಪರೀಕ್ಷೆ - ಸಂದರ್ಶನ

ಯುಪಿಎಸ್‌ಸಿ ಪರೀಕ್ಷೆಯ ಕೊನೆಯ ಮತ್ತು ನಿರ್ಣಾಯಕ ಹಂತ ವ್ಯಕ್ತಿತ್ವ ಪರೀಕ್ಷೆ ಅಥವಾ 'ಸಂದರ್ಶನ'. ಇದು ಸಾಮಾನ್ಯವಾಗಿ ಮೇ ತಿಂಗಳಿನಲ್ಲಿ ನಡೆಯುತ್ತದೆ. 1750 ಅಂಕಗಳಿಗೆ ಸಮನಾದ ಒಂಬತ್ತು ಪ್ರಶ್ನೆ ಪತ್ರಿಕೆಗಳಿಗೆ ಯಶಸ್ವಿಯಾಗಿ ಉತ್ತರ ಬರೆದು, ಸಂದರ್ಶನದ ಸುತ್ತಿಗೆ ಬೇಕಾದಷ್ಟು ಅಂಕಗಳಿಸಿದವರು 275 ಅಂಕಗಳ ಮೌಖಿಕ 'ಸಂದರ್ಶನ' ಎದುರಿಸಬೇಕು. ಮುಖ್ಯ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿದ 2500 – 3000 ಅಭ್ಯರ್ಥಿಗಳಿಗೆ ಸಂದರ್ಶನದ ಕರೆ ಬರುತ್ತದೆ. ಇವರಲ್ಲಿ ಶೇ 35ರಷ್ಟು (10001100) ಜನರಿಗೆ ಉದ್ಯೋಗ ಸಿಗುತ್ತದೆ.

ವಿವರಗಳಿಗೆ: https://upsc.gov.in



'ಯಶಸ್ಸಿಗೆ ಹಾರ್ಡ್ ವರ್ಕ್‌ಗಿಂತ ಸ್ಮಾರ್ಟ್ ವರ್ಕ್ ಅಗತ್ಯ' ಎಂದು ಪ್ರತಿಪಾದಿಸುತ್ತಾರೆ. ಮೊದಲ ಪ್ರಯತ್ನದಲ್ಲಿಯೇ ಒಳ್ಳೆಯ ರ‍್ಯಾಂಕ್‌ನಿಂದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿರುವುದು ಅವಿನಾಶ್ ಅವರ ಹೆಗ್ಗಳಿಕೆ. ಐಎಫ್‌ಎಸ್ (ಭಾರತೀಯ ವಿದೇಶಾಂಗ ಸೇವೆ) ಮಾಡಿ, ದೇಶದ ಅಂಬಾಸೆಡರ್ ಆಗಿ ಕಾರ್ಯನಿರ್ವಹಿಸಬೇಕೆಂಬ ಗುರಿ ಇಟ್ಟುಕೊಂಡಿದ್ದ ಅವರಿಗೆ ಈಗ ಆ ಹುದ್ದೆ ಪಡೆಯುವುದು ಸುಲಭವಾಗಿದೆ.

'ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಕೋಚಿಂಗ್ ಸೆಂಟರ್‌ನ ಕಲಿಕೆ ಬೇಕೇಬೇಕು ಎಂದೇನಿಲ್ಲ. ದಿನಪತ್ರಿಕೆಗಳು, ಎನ್‌ಸಿಆರ್‌ಟಿ ಪುಸ್ತಕಗಳ ಆಳ ಅಧ್ಯಯನ ಸ್ಪರ್ಧಾರ್ಥಿಗಳಿಗೆ ಅಗತ್ಯ. ದಿನಕ್ಕೆ ಕನಿಷ್ಠ ಆರು ಗಂಟೆ ಅಧ್ಯಯನಕ್ಕೆ ಮೀಸಲಿಡಬೇಕು' ಎಂದು ಅವರು ಸಲಹೆ ನೀಡುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ನಾಗರಕಟ್ಟೆ ಎಂಬ ಪುಟ್ಟಗ್ರಾಮದ ಬೆನಕ ಪ್ರಸಾದ್ ಅವರು 92ನೇ ರ‍್ಯಾಂಕ್ ಗಳಿಸುವ ಮೂಲಕ ಗ್ರಾಮಾಂತರ ಭಾಗದವರೂ ಈ ಪರೀಕ್ಷೆಯಲ್ಲಿ ಸಾಧನೆ ಮಾಡಬಹುದು ಎಂಬ ಕನಸನ್ನು ಯುವಪೀಳಿಗೆಯಲ್ಲಿ ಬಿತ್ತಿದ್ದಾರೆ. ಈಗ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಬೆನಕ ಪ್ರಸಾದ್ ಅವರು, ತಂದೆಯ ಒತ್ತಾಸೆಯಿಂದ ಯುಪಿಎಸ್‌ಸಿ ಪರೀಕ್ಷೆಯನ್ನು ಬರೆದಿದ್ದರಂತೆ. ಉಪನ್ಯಾಸಕರಾಗಿದ್ದ ಬೆನಕ ಪ್ರಸಾದ್ ಅವರ ತಂದೆ